ವಾರದ ಪತ್ರ

## ನಿತ್ಯ ಸತ್ಯ

ಝೀ ಕನ್ನಡದ 'ಸತ್ಯ' ಧಾರಾವಾಹಿಯಲ್ಲಿ ವರಮಹಾಲಕ್ಷ್ಮಿ ಪೂಜೆಗೆ ಆಹ್ವಾನಿತರಾಗಿದ್ದ ಸ್ವಾಮೀಜಿ ಅವರ ಅಣಿಮುತ್ತಿನಂಥ ನುಡಿಗಳು ಮನ ಮುಟ್ಟಿದವು.

'ವರಮಹಾಲಕ್ಷ್ಮಿ ಹಣ–ಒಡವೆಯ ಆಡಂಬರದ ಪೂಜೆಗೆ ಸಂಪ್ರೀತಗೊಂಡು ಒಲಿಯುವವಳಲ್ಲ. ನಿರಾಡಂಬರದ ಪ್ರೀತಿಯ ಭಕ್ತಿಗೆ ಒಲಿಯುವವಳು' ಎಂಬ ನುಡಿಗಳನ್ನು ವೈಚಾರಿಕ ದೃಷ್ಟಿಕೋನದಲ್ಲಿ ವಿವರಿಸಿದರು. ಅವರ ವಿವರಣೆ ನಿಜಕ್ಕೂ ಸತ್ಯವೆನಿಸಿತು. ಯಾವುದೇ ಪೂಜೆ ಪುನಸ್ಕಾರ ಇದ್ದರೂ ಸರಳ ರೀತಿಯಲ್ಲಿ ಆಚರಿಸಿದಾಗ ಭಗವಂತ ಪ್ರಸನ್ನಗೊಳ್ಳುವನು ಎನ್ನುವ ಭಾವನೆ ಮೂಡಿತು.

—ಪೂರ್ಣಿಮಾ ಮೂರ್ತಿ, ಬೆಂಗಳೂರು

## ದಾರಿ ತಪ್ಪಿಸುವ ಕುಯುಕ್ತಿ

ಕಲರ್ಸ್ ಕನ್ನಡದ 'ಗಿಣಿರಾಮ' ಧಾರಾವಾಹಿ ಕೆಲದಿನಗಳಿಂದ ನೇಹಾಳ ಸುತ್ತಲೇ ಸುತ್ತುತ್ತಿದೆ. ವರಸೆಯಲ್ಲಿ ಶಿವರಾಮನಿಗೆ ತಂಗಿಯಾಗಬಹುದಾದ ನೇಹಾ ದತ್ತು ಹೋಗಲು ಒಪ್ಪುವುದಿಲ್ಲ. ಇದೇನನ್ನು ಬಿಂಬಿಸುತ್ತದೆ? ಈಗಾಗಲೇ ಮದುವೆಯಾಗಿರುವ ಶಿವರಾಮನೊಂದಿಗೆ ಪ್ರೇಯಸಿಯಾಗಿಯೇ ಉಳಿಯುವ ಇರಾದೆಯೇ? ಅಥವಾ ಅನ್ಯೋನ್ಯವಾಗಿರುವ ಗಂಡ ಹೆಂಡತಿಯರ ನಡುವೆ ನುಸುಳಿ, ಮಹತಿಯ ಸ್ಥಾನವನ್ನು ಪಡೆಯಬೇಕೆಂಬ ಹಪಹಪಿಯೇ? ಇದೊಂದು ಕುಯುಕ್ತಿಯಲ್ಲದೆ ಮತ್ತೇನೂ ಅಲ್ಲ.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ಅಶ್ವತ್ಥ್‌ರ ಕನಸು

ಚಂದನದ 'ವಾರದ ಅತಿಥಿ' ಚೆನ್ನಾಗಿ ಮೂಡಿಬರುತ್ತಿದೆ. ಈಚೆಗ ಶಂಕರ್ ಅಶ್ವತ್ಥ್ ಅವರ ಜತೆ ನಡೆಸಿದ ಮಾತುಕತೆ ಅಮೋಘವಾಗಿತ್ತು. ಅವರ ಬಾಲ್ಯದ ಮಧುರ ನೆನಪುಗಳು, ತಂದೆ ಅಶ್ವತ್ಥ್‌ರ ಕನ್ನಡ ಚಿತ್ರರಂಗದ ನಂಟು, ಅವರ ಅವಿರತ ಶ್ರಮ ಅವರ ಕಷ್ಟದ ಬದುಕಿನ ಚಿತ್ರವನ್ನು ಕಟ್ಟಿಕೊಟ್ಟಿತು.

ಕಲರ್ಸ್ ಕನ್ನಡದ 'ರಾಮಾಚಾರಿ' ಧಾರಾವಾಹಿಯಲ್ಲಿ ಅವರ ನಟನೆ, ಧ್ವನಿ ಎಲ್ಲದರಲ್ಲಿ ಅವರ ತಂದೆಯವರೇ ಕಾಣುತ್ತಾರೆ. ಭಗವಂತ ಶಂಕರ್ ಅಶ್ವತ್ಥ್ ಮತ್ತು ಕುಟುಂಬಕ್ಕೆ ಒಳ್ಳೆಯದು ಮಾಡಲಿ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಕತ್ತಲ ಕೋಣೆಗೆ ಲಾಯಕ್ಕು

ಕಲರ್ಸ್ ಕನ್ನಡದ 'ನನ್ನರಸಿ ರಾಧೆ'ಯಲ್ಲಿ ವೈದೇಹಿಯನ್ನು ಕತ್ತಲಕೋಣೆಯಿಂದ ಕಷ್ಟ ಪಟ್ಟು ಹೊರ ತಂದಿದ್ದಕ್ಕೆ ಸರಿಯಾಗಿ ಮರ್ಯಾದೆ ಕೊಟ್ಟಿದ್ದಾಳೆ. ಸೊಸೆ ಇಂಚರಾಳ ಮೇಲೆ ಕೈ ಮಾಡುತ್ತಾಳೆ. ಹೆತ್ತ ಮಕ್ಕಳಿಗೂ ಕೈ ಎತ್ತಲು ಈಗ ಹಿಂದೇಟು ಹಾಕಬೇಕು. ಹೀಗಿರುವಾಗ ಸೊಸೆಯ ಮೇಲೆ ಈಕೆ ಅನೇಕ ಬಾರಿ ಕೈಮಾಡುತ್ತಾಳೆ.

ಅತ್ತೆಗೆ ಅಮ್ಮ ಅಂದು ಕರೆದರೂ ಮಾತ್ರ ಮಮತೆ ನೀಡದ ವೈದೇಹಿ ಎಂತಹ ತಾಯಿ? ಈಕೆಯಂತಹ ಅತ್ತೆ ಯಾರಿಗೂ ಬೇಡ. ಈಕೆಗೆ ಗಂಡ ಹೇಳುವ ಮಾತನ್ನು ಕೇಳುವ ತಾಳ್ಮೆ, ಶಕ್ತಿ ಎರಡೂ ಇಲ್ಲ. ಆಕೆ ಬೆಳಕಿನಲ್ಲಿ ಇರೊದಕ್ಕಿಂತ ಕತ್ತಲಕೋಣೆಯಲ್ಲೇ ಇರುವುದೇ ಸರಿ.

—ಮೇಘನಾ ರಘುನಂದನ್, ಹೂವಿನ ಹಡಗಲಿ

## ಅಸಂಬದ್ಧ ಕಥನಕ್ಕೆ ಹಾಕಿ ಕಡಿವಾಣ

ಬಹಳಷ್ಟು ಧಾರಾವಾಹಿಗಳ ತಂಡಕ್ಕೆ ಕಥೆಯನ್ನು ಹೇಗೆ ಮುಂದುವರಿಸುವುದು, ಕಥೆಯ ಅಂತ್ಯ ಹೇಗೆ ಎಂಬ ಪರಿಕಲ್ಪನೆಯೇ ಇದ್ದಂತೆ ಇಲ್ಲ. ಕುಡುಕ ಅಮಲಿನಲ್ಲಿ ಅಡ್ಡಾದಿಡ್ಡಿ ವಾಹನ ಚಾಲನೆ ಮಾಡಿದಂತೆ ಧಾರಾವಾಹಿಗಳೂ ಮುನ್ನಡೆಯುತ್ತವೆ. ಕಥೆಗೆ ಕೆಲವು ಸನ್ನಿವೇಶಗಳು ಪೂರಕವೋ ಅಲ್ಲವೋ ಎಂಬ ವಿವೇಚನೆ ಇರುವುದಿಲ್ಲ. ಗಣೇಶ ಹಬ್ಬ, ನವರಾತ್ರಿ, ರಾಖಿ ಹಬ್ಬ, ವರಮಹಾಲಕ್ಷ್ಮಿ ಪೂಜೆ, ಗೋಕುಲಾಷ್ಟಮಿ... ಹೀಗೆ ಯಾವುದೋ ಸನ್ನಿವೇಶ ದಿಢೀರೆಂದು ಪ್ರವೇಶ ಪಡೆಯುತ್ತದೆ. ಈ ರೀತಿಯ ಅಸಂಬದ್ಧ ಕಥೆಗಳಿಗೆ ಯಾಕೆ ಬ್ರೇಕ್ ಹಾಕುವುದಿಲ್ಲ?

—ಸಿಹಿಮೊಗೆ ರಮೇಶ್, ಮೈಸೂರು

## ಸಹ್ಯ ಜೀವನಕ್ಕೆ ಸಹಕಾರಿ

ಚಂದನವಾಹಿನಿಯ 'ಗುರೂಪದೇಶ' ಕಾರ್ಯಕ್ರಮದ ಚಿಂತನೆ ಅಮೂಲ್ಯವೆನಿಸಿದೆ. ಬೆಂಗಳೂರಿನ ಶ್ರೀ ರಾಮಕೃಷ್ಣಾಶ್ರಮದ ಮಂಗಳನಾಥಾನಂದ ಸ್ವಾಮೀಜಿಯವರ ಕಥಾಸಹಿತ ಪ್ರವಚನವನ್ನು ಮನಮುಟ್ಟುವಂತೆ ನಡೆಸಿಕೊಟ್ಟರು. ಅವರ ವಿದ್ವತ್ ಪೂರ್ಣ ಮಾಹಿತಿ, ಜೀವನದಲ್ಲಿ ಶಾಂತಿ ಕಾಪಾಡಿಕೊಂಡು ಸಹ್ಯ ಜೀವನ ನಡೆಸಲು ಸಹಕಾರಿ. ಅವರ ಉಪದೇಶಗಳನ್ನು ವೀಕ್ಷಿಸಿ ಆಲಿಸುತ್ತಾ ಹೋದಂತೆ, ದಣಿದ ದೇಹ ಮನಸ್ಸಿಗೆ ಆಹ್ಲಾದವನ್ನು ಉಂಟುಮಾಡಿದಂತೆ ಆಗುತ್ತದೆ. ಧಾವಂತದ ಜೀವನ ಶೈಲಿಯಲ್ಲಿ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯ ಕಾಪಾಡಿಕೊಳ್ಳಲು ಇಂತಹ ಕಾರ್ಯಕ್ರಮಗಳು ಅಗತ್ಯ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಮುಗಿದಿದ್ದು ಉತ್ತಮ

ಕೆಲವು ತಿಂಗಳ ಹಿಂದಷ್ಟೇ ಆರಂಭವಾಗಿದ್ದ ಕಲರ್ಸ್ ಕನ್ನಡದ 'ದೊರೆಸಾನಿ' ಧಾರಾವಾಹಿ ಮುಗಿಯಿತು. ಅನವಶ್ಯಕವಾಗಿ ದೀರ್ಘ ಎಳೆಯದೆ ಕಥೆಯನ್ನು ಅಚ್ಚುಕಟ್ಟಾಗಿ ಮುಗಿಸಿದರು. ವರ್ಷಗಟ್ಟಲೆ ತೌಡುಕುಟ್ಟುತ್ತಾ ಸಾಗಿ ವಾಕರಿಕೆ ಬರಿಸುತ್ತಿರುವ ಧಾರಾವಾಹಿಗಳಿಗಿಂತ ಇದು ಎಷ್ಟೋ ಉತ್ತಮವಾಗಿತ್ತು. ಕೊನೆಯ ಕಂತುಗಳಂತೂ ಮನಸ್ಸನ್ನು ಅತಿಯಾಗಿ ಕಲಕಿದವು. ಹೀಗೆ ಕಥೆಯನ್ನು ತೀರಾ ಎಳೆಯದೆ ಅನತಿ ಕಾಲದಲ್ಲಿ ಮುಗಿಯುವಂತಿದ್ದರೆ ಬಹು ಚೆನ್ನ ಎಂಬುದಕ್ಕೆ ಉದಾಹರಣೆ ಇದು.

—ಟಿ.ಪಿ. ಭೀಮಾರೆಡ್ಡಿ, ದಾವಣಗೆರೆ

## ಮಗಳು ಜಾನಕಿ ಮರಳಿ ಬರಲಿಲ್ಲ

ಕೊರೊನಾ ನೆಪದಲ್ಲಿ ನಿಂತುಹೋದ ಟಿ.ಎನ್. ಸೀತಾರಾಮ್ ನಿರ್ದೇಶನದ 'ಮಗಳು ಜಾನಕಿ' ಈವರೆಗೂ ಮರಳಿ ಬರಲಿಲ್ಲ. ಆ ಸಮಯದಲ್ಲಿ ನಿಂತು ಹೋದ ಬಹುತೇಕ ಧಾರಾವಾಹಿಗಳು ಮರು ಪ್ರಸಾರಗೊಂಡಿವೆ. ಆದರೆ 'ಮಗಳು ಜಾನಕಿ'ಗೆ ರಿಟರ್ನ್ ಟಿಕೆಟ್ ಸಿಗದಿರುವುದು ನಿರಾಸೆ ತಂದಿದೆ. ಈ ಧಾರಾವಾಹಿ ಮುಂದುವರೆಯಬಹುದು ಎಂಬ ನಿರೀಕ್ಷೆ ಇತ್ತು.

—ರಮಾನಂದ ಶರ್ಮಾ, ಬೆಂಗಳೂರು

## ಅಸಹಜ ಅಂತ್ಯ

'ದೊರೆಸಾನಿ' ಸಕಾಲದಲ್ಲಿ ಕೊನೆಗೊಂಡಿತು. ಇದು ಆಶ್ಚರ್ಯವನ್ನು ಉಂಟುಮಾಡಿತು. ಅದಕ್ಕೆ ಅನೇಕ ಕಾರಣಗಳಿರಬಹುದು. ಕಥಾವಸ್ತು ಅಷ್ಟೇನೂ ಗಟ್ಟಿಯಾಗಿರಲಿಲ್ಲ. ಧಾರಾವಾಹಿಯನ್ನು ಎತ್ತ ಒಯ್ಯಬೇಕೋ ತಿಳಿಯದೆ, ಆತುರಾತುರ ಸಾಗಿ ಕೊನೆಗೆ ಅಪಘಾತಕ್ಕೀಡು ಮಾಡದೆ, ಒಂದು ನಿರ್ದಿಷ್ಟ ತಾಣದಲ್ಲಿ ತಂಗುವಂತೆ ಮಾಡಿದ್ದು ಸ್ವಾಭಾವಿಕವೆನ್ನಿಸಲಿಲ್ಲ. ನಂಜಮ್ಮನ ಅಭಿನಯ ಸಹಜವಾಗಿತ್ತು.

—ಎಲ್. ರಾಮಕೃಷ್ಣ, ಬೆಂಗಳೂರು

## ಅತ್ತೆಯ ದೃಷ್ಟಿ ದೋಷ

ಝೀ ಕನ್ನಡದ 'ಸತ್ಯ' ಧಾರಾವಾಹಿಯ ಅತ್ತೆ ಸೀತಾ ತನ್ನ ಸೊಸೆ ಸತ್ಯಳನ್ನು ಬಜಾರಿ, ನಮ್ಮ ಮನೆಯ ಆಚಾರ–ವಿಚಾರ ಗೊತ್ತಿಲ್ಲ ಎಂದು ಮೂದಲಿಸುತ್ತಾಳೆ. ಆದರೆ ತನ್ನ ಮಗಳೇ ಸಂಪ್ರದಾಯವನ್ನು ಮುರಿದಿದ್ದರೂ ಅದನ್ನು ಪ್ರಶ್ನಿಸುವುದಿಲ್ಲ. ಅಷ್ಟೇ ಏಕೆ ಸ್ವತಃ ಸೀತಮ್ಮ ಅವರೇ ಮೂಲದಲ್ಲಿ ಆ ಕುಟುಂಬದ ಸೊಸೆಯಾಗಿ ಆ ಮನೆತನದ ಘನತೆಯನ್ನು ಕಾಪಾಡಿದ್ದು ಅಷ್ಟರಲ್ಲಿದೆ. ಹೀಗಿದ್ದಾಗ ಸೊಸೆಯನ್ನು ದೂಷಿಸುವ ಅಧಿಕಾರ ಆಕೆಗೆಲ್ಲಿದೆ?

—ಪದ್ಮಶ್ರೀ ಹೆಚ್.ಎಸ್., ಬೆಂಗಳೂರು